<u>ಸಾಕ್ಷಿಯನ್ನು ದಿನಾಂಕ **09-03-2026** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

**<u>ಮುಂದುವರೆದ ಪಾಟಿ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ ಎನ್ ಎಲ್ ಪಿ ವಕೀಲರಿಂದಃ</u>**

ನಾನು ಮುನಿಸಿಪಾಲಿಟಿಗೆ ಹೋದಾಗ ಆಸ್ತಿ ನಮ್ಮ ಹೆಸರಿಗೆ ಇಲ್ಲ, ನಮ್ಮ ಮಾವನ ಹೆಸರಿಗೆ ಮಾಡಿಕೊಂಡಿದ್ದಾರೆ ಎನ್ನುವುದು ಗೊತ್ತಾಯಿತು. ಈ ವಿಷಯವನ್ನು ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ. ನಾನು ಬ್ಯಾಂಕಿಗೆ ಹೋದಾಗ ಆಸ್ತಿ ನನ್ನ ಹೆಸರಿನಲ್ಲಿ ಇಲ್ಲ, ನಮ್ಮ ಮಾವನ ಹೆಸರಿನಲ್ಲಿ ಇದೆ ಎಂಬ ವಿಷಯ ಗೊತ್ತಾಯಿತು ಎಂದು ನಾನು ನನ್ನ ವಾದ ಪತ್ರದ 3 ನೇ ಪುಟದ ಪ್ಯಾರಾ ನಂಃ 4 ರಲ್ಲಿ ಹೇಳಿ ಬರೆಸಿಲ್ಲ. ಈ ಪ್ಯಾರಾದಲ್ಲಿರುವ ವಿಷಯವನ್ನು ಸಾಕ್ಷಿಗೆ ಓದಿ ಹೇಳಲಾಯಿತು, ಅದನ್ನು ಅಲ್ಲಗಳೆದಿದ್ದರಿಂದ ಸದರಿ ವಿಷಯದ **<u>ಸೂಕ್ತ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು.</u>** ದಾವಾ ಆಸ್ತಿ ನನ್ನ ಭಾವ ಮತ್ತು ನನ್ನ ಗಂಡ ಸ್ವಂತ ದುಡಿದು ಗಳಿಸಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಅವರಿಬ್ಬರೇ ದುಡಿದು ನನಗೆ ರೂ. 125 ಮುನಿಸಿಪಾಲಿಗೆ ಕಟ್ಟಿದ್ದಾರೆ, ಹೆಣ್ಣುಮಕ್ಕಳ ಕೋಟಾದ ಅಡಿ ಸರಕಾರಿ ಸೌಲಭ್ಯ ಪಡೆಯುವ ಸಲುವಾಗಿ ನನ್ನ ಹೆಸರಿಗೆ ಆ ಆಸ್ತಿಯನ್ನು ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿ ನನ್ನ ಸ್ತ್ರೀ ಧನ ಆಸ್ತಿ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆ ದಾವಾ ಆಸ್ತಿಯಲ್ಲಿ ಮನೆ ಇದೆ. ಆ ಮನೆಯು ನೆಲಮಹಡಿ ಮತ್ತು 1 ನೇ ಅಂತಸ್ತನ್ನು ಹೊಂದಿರುತ್ತದೆ. ನೆಲಮಹಡಿಯಲ್ಲಿ ನನ್ನ ಭಾವ ವಾಸ ಮಾಡುತ್ತಿದ್ದಾನೆ. 1 ನೇ ಅಂತಸ್ತಿನಲ್ಲಿ ನಾವು ಇರುತ್ತೇವೆ. ಆ ಮನೆಯನ್ನು ಕಟ್ಟಿಸುವ ಸಲುವಾಗಿ ನಮ್ಮ ಭಾವ ರೂ. 3 ಲಕ್ಷ ವನ್ನು ರಮೇಶ ಸಲೇಜ ಎಂಬುವವರಿಂದ ಸಾಲ ಎತ್ತಿದ್ದರು, ಆ ಸಾಲ ತೀರಿಸಲಿಕ್ಕೆ ಆಗದೇ, ಅವರು ದಾವೆ ಹೂಡಿದ್ದರು, ಆ ದಾವೆಯು ನನ್ನ ಮಾವನ ವಿರುದ್ಧ ಡಿಕ್ರಿಯಾಗಿದೆ. ಆ ಡಿಕ್ರಿ ಪ್ರಕಾರ ಹಣ ವಸೂಲಾತಿಗಾಗಿ ಇಪಿ ನಂಃ 81/2006 ರಂತೆ ಹಾಕಿದ್ದರು, ಆದ್ದರಿಂದ ಆ ಮನೆಯನ್ನು ದಾವಾ ಆಸ್ತಿಯಲ್ಲಿ ಅವರೇ ಕಟ್ಟಿಸಿದ್ದಾರೆ, ಅವರೇ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಮಾವ ದಾವಾ ಆಸ್ತಿಯ ಮೇಲೆ ಸಾಲ ತೆಗೆದುಕೊಂಡಿದ್ದಾನೆ ಮತ್ತು ಆ

ಬಗ್ಗೆ ನಮ್ಮ ಮಾವ ಅಗ್ರಿಮೆಂಟು ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಮಾಲೀಕತ್ವ, ಅಧಿಕಾರ ಇಲ್ಲ ಮತ್ತು ಅದರಲ್ಲಿ ನಾನು ವಾಸವಾಗಿಲ್ಲ ಎಂದರೆ ಸರಿಯಲ್ಲ. 8 ವರ್ಷದ ಹಿಂದೆ ನಾನು ಮುನಿಸಿಪಾಲಿಗೆಗೆ ಅರ್ಜಿ ಕೊಟ್ಟಾಗ ಅವರು ಆಸ್ತಿ ನಿನ್ನ ಹೆಸರಿನಲ್ಲಿ ಇಲ್ಲ ಎಂದು ತಿಳಿಸಿದರು. ನನ್ನ ಭಾವ ನನಗೆ ಕೇಳದೇ ಆತನ ಹೆಸರಿಗೆ ಮಾಡಿಸಿಕೊಂಡಿದ್ದಾರೆ. ನನ್ನ ಗಂಡ ಮುನಿಸಿಪಾಲಿಟಿಯ ಮುಟೇಷನ್ ಸೆಕ್ಷನಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಪ್ರತಿವಾದಿ ನಂಃ-1 ಮತ್ತು 2 ರವರ ಮಧ್ಯೆ ಈಗಾಗಲೇ ಪಾಲುವಿಭಾಗ ಆಗಿದೆ, ಆದ್ದರಿಂದ ಅವರು 5 ಆಸ್ತಿಗಳಲ್ಲಿ ಜಂಟಿ ಮಾಲೀಕರಿದ್ದರು, ಅವರು ಭಾಗ ಮಾಡಿಕೊಂಡ ನಂತರ ಈ ದಾವಾ ಸ್ವತ್ತು ನಮ್ಮ ಭಾವನ ಹಿಸ್ಸೆಗೆ ಹೋಗಿರುತ್ತದೆ, ಉಳಿದ ಆಸ್ತಿಗಳು ನನ್ನ ಗಂಡನ ಹೆಸರಿಗೆ ಬಂದಿರುತ್ತವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು, ಗೈರುಹಾಜರಿದ್ದರಿಂದ ಅವರ ಪರ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಜಿ. ಬಿ. ಹಳ್ಳಾಕಾಯಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.